# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು–570006

**ಸಂಖ್ಯೆ:ಕರಾಮುವಿ/ಪವಿ/ಘ.ವಿ./501/2013–2014** **ದಿನಾಂಕ : 04–12–2014**

## ಅಧಿಸೂಚನೆ

### ವಿಷಯ : ವಿಶ್ವವಿದ್ಯಾನಿಲಯದ 15ನೇ ವಾರ್ಷಿಕ ಘಟಿಕೋತ್ಸವ –2015

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ **ಹದಿನೈದನೇ ವಾರ್ಷಿಕ ಘಟಿಕೋತ್ಸವವು –2015ನೇ ಮಾರ್ಚ್ ತಿಂಗಳಲ್ಲಿ** ನಡೆಸಲು ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದ ನಿಗದಿತ ಸಮಯ ಮತ್ತು ಸ್ಥಳವನ್ನು ಮುಂದೆ ಪ್ರಕಟಿಸಲಾಗುವುದು ಎಂದು ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

2. **ಉಪಸ್ಥಿತಿಯಲ್ಲಿ ಘಟಿಕೋತ್ಸವದಲ್ಲಿ ಭಾಗವಹಿಸಲು ಈ ಕೆಳಕಂಡವರು ಅರ್ಹರಾಗಿರುತ್ತಾರೆ.**

   **ಪಿಹೆಚ್.ಡಿ, ಎಂ.ಫಿಲ್, ಪದಕ ಮತ್ತು ನಗದು ಬಹುಮಾನ ವಿಜೇತರು ಹಾಗೂ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು.**

3. **ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಈ ಕೆಳಕಂಡವರು ಅರ್ಹರಾಗಿರುತ್ತಾರೆ.**

   (i) ವಿಶ್ವವಿದ್ಯಾನಿಲಯವು ಮೇ/ಜೂನ್ 2014ರಲ್ಲಿ ನಡೆಸಿದ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು.

   (ii) ವಿಶ್ವವಿದ್ಯಾನಿಲಯವು ನವೆಂಬರ್/ಡಿಸೆಂಬರ್ 2013 ಮತ್ತು ಮೇ/ಜೂನ್ 2014ರಲ್ಲಿ ನಡೆಸಿದ ಸ್ನಾತಕ ಪೂರ್ವ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು (ಅನುಪಸ್ಥಿತಿಯಲ್ಲಿ ಮಾತ್ರ).

   (iii) ಎಲ್ಲಾ ಡಿಪ್ಲೊಮಾ ವಿದ್ಯಾರ್ಥಿಗಳು (ಅನುಪಸ್ಥಿತಿಯಲ್ಲಿ ಮಾತ್ರ).

4. ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ **'ಉಪಸ್ಥಿತಿಯಲ್ಲಿ ಅಥವಾ ಅನುಪಸ್ಥಿತಿಯಲ್ಲಿ'** ಪದವಿ ಪಡೆಯಬಹುದು. ಅರ್ಜಿ ನಮೂನೆಯನ್ನು ಸಮೀಪದ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರದಲ್ಲಾಗಲಿ ಅಥವಾ ಕಛೇರಿ ವೇಳೆಯಲ್ಲಿ **ಕುಲಸಚಿವರು (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು–570006** ಅವರಿಂದಾಗಲಿ ನೇರವಾಗಿ ಪಡೆಯಬಹುದು. ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.ksoumysore.edu.in** ಇಲ್ಲಿಂದಲೂ ಸಹ ನೇರವಾಗಿ ಪಡೆಯಬಹುದಾಗಿದೆ.

5. ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ನೇರವಾಗಿ ಪ್ರಮಾಣ ಪತ್ರವನ್ನು ಘಟಿಕೋತ್ಸವ ನಡೆದ **ಮೂರು ತಿಂಗಳ ನಂತರ** ತ್ವರಿತ ಅಂಚೆ ಮೂಲಕ ಕಳುಹಿಸಿಕೊಡಲಾಗುವುದು.

6. ಪದವಿ ಪ್ರಮಾಣ ಪತ್ರಕ್ಕಾಗಿ ನಿಗದಿತ ಶುಲ್ಕ ಈ ಕೆಳಕಂಡಂತಿದೆ.

| | | |
|---|---|---|
| **ಉಪಸ್ಥಿತರು** | : ಪದಕ ಮತ್ತು ನಗದು ಬಹುಮಾನ ವಿಜೇತರು, ಹಾಗೂ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು ........... | : **800–00** |
| **ಅನುಪಸ್ಥಿತರು** | : ಎಲ್ಲಾ ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಪದವೀಧರರು ......... | : **900–00** |
| **ಉಪಸ್ಥಿತರು** | : ಎಂ.ಫಿಲ್ ಮತ್ತು ಪಿಎಚ್.ಡಿ .......... | : **1000–00** |
| **ಅನುಪಸ್ಥಿತರು** | : ಎಂ.ಫಿಲ್ ಮತ್ತು ಪಿಎಚ್.ಡಿ .......... | : **1200–00** |
| **ಅನುಪಸ್ಥಿತರು** | : ಎಲ್ಲಾ ಡಿಪ್ಲೋಮಾ | : **850–00** |

7. **ಯಾವುದೇ ಪದವಿಯ ವಿದ್ಯಾರ್ಥಿಯು ಅಂತಿಮ ವರ್ಷದ ಅಂಕಪಟ್ಟಿಯಲ್ಲಿ ಎನ್.ಸಿ.ಎಲ್/ದರ್ಜೆ ಘೋಷಣೆ ತೆರವುಗೊಳಿಸಿಲ್ಲದಿದ್ದರೆ ಅಥವಾ ಹೆಸರು ವ್ಯತ್ಯಯವಾಗಿರುವಂತಹ ವಿದ್ಯಾರ್ಥಿಗಳು ತಮ್ಮ ಮೂಲ ಅಂಕಪಟ್ಟಿಯನ್ನು ಕುಲಸಚಿವರು(ಪರೀಕ್ಷಾಂಗ) ಇವರಿಗೆ ದಿನಾಂಕ: 10–01–2015ರ ಒಳಗೆ ಸಲ್ಲಿಸಿ ಸರಿಪಡಿಸಿಕೊಳ್ಳಬೇಕು. ದರ್ಜೆ ಘೋಷಣೆ ಇಲ್ಲದಿದ್ದಲ್ಲಿ ಪದವಿ ಪತ್ರ ಪಡೆಯಲು ಅರ್ಹರಾಗುವುದಿಲ್ಲ.**

8. ನಿಗದಿಪಡಿಸಿದ ಸ್ಥಳದಲ್ಲಿ ಎಲ್ಲಾ ಮಾಹಿತಿಗಳನ್ನು ಅರ್ಜಿಯಲ್ಲಿ ತುಂಬಿದ ನಂತರ ಒಂದು ಪಾಸ್ ಪೋರ್ಟ್ ಅಳತೆಯ ಕಲರ್ ಫೋಟೋವನ್ನು ಅಂಟಿಸುವುದು. ಎರಡು ಫೋಟೋಗಳನ್ನು ಸಣ್ಣ ಲಕೋಟೆಯಲ್ಲಿ ಇರಿಸಿ ಪ್ರತ್ಯೇಕವಾಗಿ ಅರ್ಜಿಯೊಂದಿಗೆ ಲಗತ್ತಿಸುವುದು. ಭರ್ತಿ ಮಾಡಿದ ಅರ್ಜಿಯನ್ನು, **ಕುಲಸಚಿವರು (ಪರೀಕ್ಷಾಂಗ), ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯ ಮುಕ್ತಗಂಗೋತ್ರಿ, ಮೈಸೂರು–570006** ಇವರಿಗೆ ಈ ಕೆಳಗೆ ಸೂಚಿಸಿರುವ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

| ಶುಲ್ಕ ಪಾವತಿಸಲು ಕೊನೆಯ ದಿನಾಂಕ (ಉಪಸ್ಥಿತರಿಗೆ ಮಾತ್ರ) | |
|---|---|
| **ದಂಡ ಶುಲ್ಕವಿಲ್ಲದೆ** | **15–01–2015** |
| **100/– ರೂ. ದಂಡ ಶುಲ್ಕದೊಡನೆ** | **30–01–2015** |

**ಆದೇಶದ ಮೇರೆಗೆ,**

5/12/14

**ಕುಲಸಚಿವ**